ದಿನಾಂಕಃ 04/07/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಶ್ರೀ ಟಿ.ಎಸ್.ಕೆ. ಆರೋಪಿಗಳ ಪರ ವಕೀಲರಿಂದ**

ನಾನು ಪೊಲೀಸ್ ಠಾಣೆಗೆ ದಿನ ನಿತ್ಯ ಬೆಳಿಗ್ಗೆ 8-00 ಗಂಟೆಗೆ ಹೋಗುತ್ತಿದ್ದೆ. ನಾನು ದೂರನ್ನು ಪಡೆದುಕೊಂಡು ಸತ್ಯಾಸತ್ಯತೆ ಬಗ್ಗೆ ಪರಿಶೀಲನೆ ಮಾಡಿರುತ್ತೇನೆ. ದೂರು ದಾಖಲಾದ ಮಾಡಿದ ನಂತರ ತಕ್ಷಣಕ್ಕೆ ನಾನು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ. ಸಿಪಿಐ ರವರ ವಾಸಸ್ಥಾನ ಕೊರಟಗೆರೆ. ಘೋರ ಅಪರಾಧ ಪ್ರಕರಣಗಳನ್ನು ಸಿಪಿಐ ಗ್ರೇಡ್ ನವರು ಮಾಡಬೇಕು ಎಂದು ಪೋಲೀಸ್ ಮ್ಯಾನ್ಯೂಯಲ್ ನಲ್ಲಿ ಇರುತ್ತದೆ. ದೂರು ದಾಖಲು ಮಾಡಿದ ತಕ್ಷಣ ನಾನು ಸಿಪಿಐ ರವರಿಗೆ ಕಡತವನ್ನು ಹಸ್ತಾಂತರ ಮಾಡಿರುತ್ತೇನೆ. ಮೊದಲನೆ ಸಿ.ಡಿ ನಾನು ಓಪನ್ ಮಾಡಿರುತ್ತೇನೆ, ಸಿಪಿಐ ರವರು ಸದರಿ ಸಿ.ಡಿಯನ್ನು ಮುಂದುವರೆಸಿರುತ್ತಾರೆ. ಆರೋಪಿತರ ಪತ್ತೆಗಾಗಿ ನನ್ನನ್ನು ಸಿಪಿಐ ರವರು ಬರವಣಿಗೆಯ ಮೂಲಕ ನೇಮಕ ಮಾಡಿದ್ದರು. ನನ್ನನ್ನು ಆರೋಪಿಪತರ ಪತ್ತೆಗಾಗಿ ನೇಮಕ ಮಾಡಿದ ಬಗ್ಗೆ ದಾಖಲೆಯನ್ನು ತನಿಖಾಧಿಕಾರಿ ದೋಷರೋಪಣ ಪತ್ರದ ಜೊತೆಗೆ ಸಲ್ಲಿಸಿರುತ್ತಾರೆ. ನನ್ನ ಜೊತೆ ಆರೋಪಿತರ ಪತ್ತೆಗಾಗಿ ಸಿಬ್ಬಂದಿಗಳನ್ನು ಸಿಪಿಐ ರವರೇ ಇಂತಹ ಸಿಬ್ಬಂದಿಗಳನ್ನು ಕರೆದುಕೊಂಡು ಹೋಗಿ ಎಂದು ಹೇಳಿರುತ್ತಾರೆ. ಸಂಜೆ 6-00 ಗಂಟೆಗೆ ನನ್ನನ್ನು ವೃತ್ತ ನಿರೀಕ್ಷಕರು ಆರೋಪಿತರ ಪತ್ತೆಗಾಗಿ ನೇಮಿಸಿರುತ್ತಾರೆ,

ವೃತ್ತ ನೀರೀಕ್ಷಕರು ಆರೋಪಿತರ ಚಹರೆ ವ್ಯಕ್ತಿತ್ವ ಮತ್ತು ಗುರುತಿನ ಬಗ್ಗೆ ಯಾವುದೇ ಮಾಹಿತಿ ನನಗೆ ಕೊಟ್ಟಿರಲಿಲ್ಲ. ದಿ.17.01.2019 ರವರೆಗೂ ನನಗೆ ಆರೋಪಿತರ ಚಹರೆ ವ್ಯಕ್ತಿತ್ವ ಮತ್ತು ಗುರುತಿನ ಬಗ್ಗೆ ಮಾಹಿತಿ ಇರಲಿಲ್ಲ ಎನ್ನುವುದು ನಿಜ. ಬಾತ್ಮಿದಾರರಿಂದ ಮಾಹಿತಿ ಬಂದ ಬಗ್ಗೆ ಸಿ.ಡಿ ಯಲ್ಲಿ ಆಗಲೀ ನನ್ನ ವೈಯಕ್ತಿಯ ಡೈರಿಯಲ್ಲಿ ಆಗಲೀ ನಮೂದು ಮಾಡಿರುವುದಿಲ್ಲ. ಮಾರನೇ ದಿನ ಬೆಳಿಗ್ಗೆ 6-00 ಗಂಟೆಗೆ ಕೊರಟಗೆರೆ ಠಾಣೆಯಿಂದ ಹೊರಟಿರುತ್ತೇವೆ. ಕೊರಟಗೆರೆ ಠಾಣೆಯಿಂದ ಅಣ್ಣಯ್ಯಪಾಳ್ಯಕ್ಕೆ ಸುಮಾರು 32 ಕಿ.ಮೀಟರ್ ಅಂತರ ಇರುತ್ತದ ಆ ದಿನ ನಾವು ತುಮಕೂರು ಮಾರ್ಗವಾಗಿ ಹೋಗಿರುತ್ತೇವೆ. ನನಗೆ ಅಣ್ಣಯ್ಯನಪಾಳ್ಯದ ಮಾರ್ಗ ಮೊದಲು ನನಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ.

ಲಕ್ಷ್ಮೀಕಾಂತಯ್ಯ ರವರ ಜಮೀನು ಊರಿನಿಂದ ಮುಕ್ಕಾಲು ಕಿ.ಮೀಟರ್ ದೂರ ಇರುತ್ತದೆ. ಸದರಿ ಜಮೀನಿಗೆ ಹೋಗಲು ಕಚ್ಚಾ ರಸ್ತೆ ಇರುತ್ತದೆ , ಸದರಿ ಕಚ್ಚಾ ರಸ್ತೆ ಮುಖಾಂತರ ವಾಹನಗಳು ಹೋಗುತ್ತವೆ, ನಾಲ್ಕು ಚಕ್ರದ ವಾಹನಗಳು ಹೋಗಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಾವು ಹೋದ ಜಮೀನಿನಲ್ಲಿ ಬೆಳೆ ಇತ್ತು. ವಾಹವನ್ನು ಜಮೀನಿನ ಒಳಗೆ ತೆಗೆದುಕೊಂಡು ಹೋಗಿರುವುದಿಲ್ಲ. ಲಕ್ಷ್ಮೀಕಾಂತಯ್ಯ ರವರ ಜಮೀನು ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ. ಆರೋಪಿತರನ್ನು ವಶಕ್ಕೆ ತೆಗೆದುಕೊಳ್ಳುವ ಮುನ್ನ ಯಾರನ್ನಾದರೂ ಕರೆಸಿ ಅವರ ಗುರುತಿನ ಬಗ್ಗೆ ಕಚಿತಪಡಿಸಿಕೊಂಡಿರುವುದಿಲ್ಲ. ಆರೋಪಿತರು ಲಕ್ಷ್ಮೀಕಾಂತಯ್ಯ ರವರ ಜಮೀನಿನಲ್ಲಿ ಇರದೇ ಇದ್ದರೂ ಸುಳ್ಳು ದಸ್ತಗಿರಿ ವರದಿ ತಯಾರು ಮಾಡಿಕೊಂಡು ಬಂದಿದ್ದೇನ ಎಂದರೆ ಸರಿಯಲ್ಲ. ಯಾವುದೇ ಆರೋಪಿತರನ್ನು ಲಕ್ಷ್ಮೀಕಾಂತಯ್ಯ ರವರ ಜಮೀನಿನಲ್ಲಿ ದಸ್ತಗಿರಿ ಮಾಡದೇ ಇದ್ದರೂ ನಿಪಿ-1 ರಂತೆ ಸುಳ್ಳು ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಪ್ರಥಮ ವರ್ತಮಾನ ವರದಿ ದಾಖಲು ಮಾಡಿದ ನಂತರ ದಿ. 16.01.2019 ರವರೆಗೆ ನಾನು ಈ ಪ್ರಕರಣದ ತನಿಖೆಯಲ್ಲಿ ಪಾಲ್ಗೊಂಡಿರುವುದಿಲ್ಲ ಎನ್ನುವುದು ನಿಜ. ದಿ.16.01.2019 ರಿಂದ ದಿ.07.03.2019 ರವರೆಗೆ ತನಿಖಾಧಿಕಾರಿ ನನ್ನ ಸಹಾಯ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಇನೋವಾ ಪಾರ್ಚುನರ್ ವಾಹನ ಮಾಲೀಕರ ಬಗ್ಗೆ ಮಾಹಿತಿ ಒದಗಿರಸಿರಲಿಲ್ಲ ಕೇವಲ ನೊಂದಣಿ ನಂಬರ್ ಗಳನ್ನು ಕೊಟ್ಟಿದ್ದರು. ಸದರಿ ವಾಹನಗಳು ನೊಂದಣಿ ನಂಬರ್ ಯಾರ ಹೆಸರಿನಲ್ಲಿ ಇವೆ ಮತ್ತು ಯಾವ ಆರ್.ಟಿ.ಓ ಕಚೇರಿಯಲ್ಲಿ ನೊಂದಣಿ ಆಗಿದೆ ಎಂದು ತನಿಖೆ ಮಾಡಿರುವುದಿಲ್ಲ ಆದರೆ ವಾಹನ ಸಮನ್ವಿಯ ತಂತ್ರಾಂಶದಲ್ಲಿ ವಾಹನದ ಮಾಲೀಕರ ಬಗ್ಗೆ ತಿಳಿದುಕೊಂಡಿರುತ್ತೇನೆ. ಸದರಿ ಹ್ಯಾಪ್ ನಲ್ಲಿ ಯಾವ ಆರ್.ಟಿ.ಒ ದಲ್ಲಿ ವಾಹನ ನೊಂದಣಿ ಆಗಿರುತ್ತದೆ ಎಂದು ನಮೂದು ಇರುತ್ತದೆ ಎಂದರೆ ನಿಜ. ವಾಹನವನ್ನು ಅಮಾನತ್ತುಪಡಿಸಿಕೊಳ್ಳುವ ಕಾಲಕ್ಕೆ ವಾಹನಕ್ಕೆ ಏನು ಜಖಂ ಆಗಿರುತ್ತದೆ ಎಂದು ಪಂಚನಾಮೆಯನ್ನು ಮಾಡಿರುವುದಿಲ್ಲ. ಸದರಿ ವಾಹನಗಳು ಚಾಲನಾ ಸ್ಥಿತಿಯಲ್ಲಿದ್ದವು. ಸದರಿ ಎರಡು ವಾಹನಗಳ ಬೀಗ ಎರಡು ವಾಹನಗಳ ಡ್ಯಾಶ್ ಬೋರ್ಡ್ ನಲ್ಲಿದ್ದವು. ಸದರಿ ವಾಹನಗಳನ್ನು ಸಿಪಿಸಿ ಚಂದ್ರಶೇಖರ್ ಮತ್ತು ಸಿಪಿಸಿ ಲೋಹಿತ್ ರವರು ವಾಹನಗಳನ್ನು

ಚಾಲಯಿಸಿಕೊಂಡು ಸಿಪಿಐ ಕಚೇರಿಗೆ ತೆಗೆದುಕೊಂಡು ಬಂದಿರುತ್ತಾರೆ. ಸದರಿ ವಾಹನಗಳನ್ನು ಲಕ್ಷ್ಮೀಕಾಂತಯಕ್ಕಿ ರವರ ಜಮೀನಿನಲ್ಲಿ ವಶಕ್ಕೆ ಪಡೆದುಕೊಂಡಿರುವುದಿಲ್ಲ , ವಸ್ತುಸ್ಥಿತಿಗೆ ವಿರುದ್ಧವಾಗಿ ವರದಿ ಕೊಟ್ಟಿರುತ್ತೇನ ಎಂದರೆ ಸುಳ್ಳು. ನಾನು ತನಿಖಾಧಿಕಾರಿ ಚಾಸಾ-77 ರವರ ಮುಂದೆ ವಾಹನಗಳನ್ನು ಹಾಜರುಪಡಿಸಿರುವುದಿಲ್ಲ ತನಿಖಾಧಿಕಾರಿ ನನ್ನ ಸಮಕ್ಷಮ ಪಂಚನಾಮೆ ಮಾಡಿ ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರನ್ನು ದಿ. 17.01.2019 ರಂದು ಲಕ್ಷ್ಮೀಕಾಂತಯ್ಯ ರವರ ಜಮೀನಿನಲ್ಲಿ ದಸ್ತಗಿರಿ ಮಾಡಿರುವುದಿಲ್ಲ ನಾನು ಮತ್ತು ಸಿಪಿಐ ರವರು ಸೇರಿ ಅಮಾಯಕರಾದ ಆರೋಪಿತರನ್ನು ಈ ಪ್ರಕರಣದಲ್ಲಿ ಸಿಲುಕಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಮತ್ತು ಸೃಷ್ಟಿ ಮಾಡಿದ ಅಂಶಗಳು ಎಂದರೆ ಸರಿಯಲ್ಲ.

**ಮರು ವಿಚಾರಣೆ** ಇಲ್ಲ.

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಒ ತಿ ಹೇ ಸ ಇದೆ.

4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು-ಮಧುಗಿರಿ.